# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ –153 ಜಯನಗರ ವಾರ್ಡ್ ಸಭೆಯ ನಡವಳಿ

ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಜಯನಗರ ವಾರ್ಡ್–153 ರಲ್ಲಿ ವಾರ್ಡ್ ಸಭೆಯನ್ನು ಮಾನ್ಯ ಶ್ರೀಮತಿ. ವರಲಕ್ಷ್ಮಮ್ಮ ಎಲ್. ನೋಡಲ್ ಅಧಿಕಾರಿ ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರ ಅಪ್ಪಣೆ ಮೇರೆಗೆ ದಿನಾಂಕ:21/06/2022 ಮಂಗಳವಾರದಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್ ಕಮಿಟಿ ಸಭೆಯನ್ನು ಕರೆಯಲಾಗಿದ್ದು, ವಾರ್ಡ್ ಕುಂದು ಕೊರತೆಗಳ ಬಗ್ಗೆ ಚರ್ಚಿಸಲು ಸದಸ್ಯರಿಗೆ ಆಹ್ವಾನ ನೀಡಿದ್ದು, ಸಭೆಯನ್ನು ನಡೆಸಲಾಯಿತು.

**ಹಾಜರಿದ್ದವರು:–**

1. ಶ್ರೀಮತಿ. ವರಲಕ್ಷ್ಮಮ್ಮ ಎಲ್. ನೋಡಲ್ ಅಧಿಕಾರಿ ರವರು.
2. ಶ್ರೀ. ನವೀನ್‌ಕುಮಾರ್ ಕೆ. ಕಾರ್ಯದರ್ಶಿ.
3. ಶ್ರೀಮತಿ. ರಮಾದೇವಿ ಸ.ಕಾ.ನಿ. ಅಭಿಯಂತರರು BESCOM.
4. ಶ್ರೀ. ವಿಜಯಕುಮಾರ್ ಜಿ. ಕಿರಿಯ ಅಭಿಯಂತರರು BESCOM.
5. ಶ್ರೀಮತಿ. ಶ್ರೀಜಾ, ಸಹಾಯಕ ಅಭಿಯಂತರರು, BWSSB.
6. ಶ್ರೀ. ಶ್ರೇಯಸ್, ಸಹಾಯಕ ಅಭಿಯಂತರರು ವಿದ್ಯುತ್ (ದಕ್ಷಿಣ)
7. ಶ್ರೀ. ಮಹದೇವಯ್ಯ, ಎ.ಎಸ್.ಐ, ಜಯನಗರ ಸಂಚಾರ ಪೊಲೀಸ್ ಠಾಣೆ.
8. ಶ್ರೀ. ಅಂತೋಣಿರಾಜ್ ಎ.ಎಸ್.ಐ, ಮೈಕೋ ಲೇಔಟ್ ಸಂಚಾರ ಪೊಲೀಸ್ ಠಾಣೆ.
9. ಶ್ರೀ. ಜಿ.ಟಿ. ಬೊಮ್ಮೇಗೌಡ, ಕೆಲಸ ಪರಿವೀಕ್ಷಕರು ವಾರ್ಡ್–153
10. ಶ್ರೀ. ವಿಜಯ್, ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್–153.
11. ಶ್ರೀ. ಅನೀಸ್ ಅಹಮದ್, ಡಾ॥ ರಘುನಾಥ್, ಶ್ರೀ. ಜಿ.ಎಸ್. ಬಾಲಾಜಿ, ಶ್ರೀ. ಸೋಮಶೇಖರ್‌ಕೆ.ಸಿ ಶ್ರೀ. ಆರ್.ಎ. ರಾಧಾಕೃಷ್ಣ, ಶ್ರೀ. ಆರ್.ಜೆ. ಪ್ರಫುಲ್ಲಾ ಚಂದ್ರ ಶ್ರೀ. ಭರತ್ ಭುವನನ್ ವಿ, ಶ್ರೀ. ಲಕ್ಷ್ಮೀಶ ಕೆ.ಎಂ, ಶ್ರೀ. ಜಯಕೃಷ್ಣನ್, ಶ್ರೀ. ಫಜಲ್ ಖಾನ್, (ಸಾರ್ವಜನಿಕರು).

**ಸಭೆಗೆ ಗೈರು ಹಾಜರಾದ ಇಲಾಖೆಗಳು:–**

1. ಅರಣ್ಯ ಇಲಾಖೆಯ ಅಧಿಕಾರಿಗಳು.
2. ಪೊಲೀಸ್ ಇನ್ಸ್‌ಪೆಕ್ಟರ್ ಬಸವನಗುಡಿ ಸಂಚಾರ ಪೊಲೀಸ್ ಠಾಣೆ.
3. ಪೊಲೀಸ್ ಇನ್ಸ್‌ಪೆಕ್ಟರ್, ಸಿದ್ದಾಪುರ, ತಿಲಕ್‌ನಗರ ಮತ್ತು ಬಸವನಗುಡಿ ಕಾನೂನು ಸುವ್ಯವಸ್ಥೆ.

*********

R/1 24/06/22

24/6/22

Police Sub-Inspector
Siddapura Police Station
Bengaluru-560 0..
24/06/2022
1-25 PM.

24/6/22



Scanned with CamScanner

1. ವಾರ್ಡ್–153 ರ ಕುಂದು ಕೊರತೆಗಳ ಬಗ್ಗೆ ಚರ್ಚಿಸುವ ಸಂಬಂಧ ದಿನಾಂಕ:21/06/2022 ಸೋಮವಾರದಂದು ಬೆಳಗ್ಗೆ 11.00 ಗಂಟೆಗೆ ನಿಗಧಿತ ಸಮಯಕ್ಕೆ ಸಭೆಯನ್ನು ಪ್ರಾರಂಭಿಸಲಾಯಿತು.

2. ನೋಡಲ್ ಅಧಿಕಾರಿಯವರು ಮಾತನಾಡಿ ಕಳೆದ ಸಭೆಯಲ್ಲಿ ಚರ್ಚಿಸಿದ ವಿಷಯದ ಬಗ್ಗೆ ಸಭೆಯಲ್ಲಿ ಪ್ರಸ್ತಾಪಿಸಲು ವಾರ್ಡಿನ ಅಭಿಯಂತರರಿಗೆ ತಿಳಿಸಿದರು. ನಂತರ ವಾರ್ಡ್ ಅಭಿಯಂತರರು ಮಾತನಾಡಿ ಕಳೆದ ಸಭೆಯಲ್ಲಿ ಚರ್ಚಿಸಿದ ವಿಷಯಗಳ ಸಭೆಯ ನಡವಳಿಯನ್ನು ಸಭೆಯಲ್ಲಿ ಓದಿ ತಿಳಿಸಿದರು.

3. ನೋಡಲ್ ಅಧಿಕಾರಿಯವರು ಮಾತನಾಡಿ ಮಳೆಗಾಲ ಹೆಚ್ಚಾಗಿರುವುದರಿಂದ ಡೆಂಗ್ಯೂ ಜ್ವರದ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸುವ ಬಗ್ಗೆ ವಾರ್ಡ್ ವ್ಯಾಪ್ತಿಯ ಎಲ್ಲಾ ಕಡೆ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸಾರ್ವಜನಿಕರಿಗೆ ಅರಿವು ಮೂಡಿಸಲು ಕ್ರಮ ಕೈಗೊಳ್ಳುವಂತೆ ಹಾಗೂ ನೀರು ನಿಲ್ಲುವ ಪ್ರದೇಶಗಳಲ್ಲಿ ಅಥವಾ ಮೋರಿ ತುಂಬಿರುವ ಪ್ರದೇಶಗಳಲ್ಲಿ ಔಷದಿ ಸಿಂಪಡಿಸುವ ಬಗ್ಗೆ ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿ ತಿಳಿಸಿದರು.

ಕ್ರಮ: ಹಿರಿಯ ಆರೋಗ್ಯ ಪರಿವೀಕ್ಷಕರು & ಆರೋಗ್ಯ ವೈದ್ಯಾಧಿಕಾರಿಗಳು

4. ವಾರ್ಡ್ 153ರ ಸ್ಥಳಿಯರಾದ ಅನೀಸ್ ಅಹಮದ್ ರವರು ಮಾತನಾಡಿ ಬಿ.ಹೆಚ್.ಇ.ಎಲ್ ಎಸ್.ಆರ್.ಕೆ ಗಾರ್ಡನ್ ಸುತ್ತಮತ್ತ ಸುಮಾರು 10 ರಿಂದ 15 ಬೀದಿ ದೀಪಗಳನ್ನು ಅಳವಡಿಸಲು ಕೋರಿದರು. ಈ ಬಗ್ಗೆ ನೋಡಲ್ ಅಧಿಕಾರಿಯವರು ಮಾತನಾಡಿ ಸಭೆಯಲ್ಲಿ ಹಾಜರಿದ್ದ ಶ್ರೀ. ಶ್ರೇಯಸ್, ಸಹಾಯಕ ಅಭಿಯಂತರರು ರವರಿಗೆ ಈ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳಲು ತಿಳಿಸಿದರು.

ಕ್ರಮ: ಸಹಾಯಕ ಅಭಿಯಂತರರು ವಿದ್ಯುತ್ (ದಕ್ಷಿಣ)

5. ವಾರ್ಡ್ 153ರ ಸ್ಥಳೀಯರಾದ ಜಯಕೃಷ್ಣನ್ ರವರು ಮಾತನಾಡಿ ಬಿ.ಹೆಚ್.ಇ.ಎಲ್ ಮುಖ್ಯರಸ್ತೆಯಲ್ಲಿ ಮೋರಿಯಿಂದ ತೆಗೆದಿರುವ ರಸ್ತೆಯನ್ನು ತೆರವುಗೊಳಿಸಲು ಕೋರಿದರು. ಈ ಬಗ್ಗೆ ನೋಡಲ್ ಅಧಿಕಾರಿಯವರು ಮಾತನಾಡಿ ವಾರ್ಡ್ ಅಭಿಯಂತರರಿಗೆ ಸದರಿ ಡೆಬ್ರಿಸ್‌ನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳುವಂತೆ ತಿಳಿಸಿದರು.

ಕ್ರಮ: ವಾರ್ಡ್ ಅಭಿಯಂತರರು



Scanned with CamScanner

6. ವಾರ್ಡ್ 153ರ ಸ್ಥಳೀಯರಾದ ಶ್ರೀ. ರಾಧಾಕೃಷ್ಣ ರವರು ಮಾತನಾಡಿ 7ನೇ ಅಡ್ಡರಸ್ತೆ, 2ನೇ ಬ್ಲಾಕ್ ಜಯನಗರ (ನಂದಿನ ಬೂತ್ ಹಿಂಭಾಗ) ಸುಮಾರು ವರ್ಷಗಳಿಂದ ಒಂದು ಕಬ್ಬಿಣದ ಜನರೇಟರ್ ಡಬ್ಬ ಇದ್ದು, ಸದರಿ ಜಾಗದಲ್ಲಿ ಸಾರ್ವಜನಿಕರು ಕಸ ಹಾಕುತ್ತಿರುತ್ತಾರೆ. ಇದರಿಂದ ಬಹಳಷ್ಟು ಸಮಸ್ಯೆ ಉಂಟಾಗುತ್ತಿದೆ ಆದ್ದರಿಂದ ಸದರಿ ಡಬ್ಬವನ್ನು ತೆರವುಗೊಳಿಸಲು ಕೋರಿದರು. ಈ ಬಗ್ಗೆ ವಾರ್ಡ್ ಅಭಿಯಂತರರು ಮಾತನಾಡಿ ಸದರಿ ಡಬ್ಬವು ಬಹಳ ದೊಡ್ಡದಾಗಿದ್ದು, ತೂಕವಾಗಿದ್ದು, ಕಾರ್ಮಿಕರಿಂದ ಮತ್ತು ಪಾಲಿಕೆಯ ಲಾರಿ ಸಹಾಯಕದಿಂದ ತೆರವುಗೊಳಿಸಲು ಕಷ್ಟಸಾಧ್ಯವಾಗಿರುತ್ತದೆ. ಸದರಿ ಡಬ್ಬವನ್ನು ತೆರವುಗೊಳಿಸಲು ಕ್ರೇನ್ ಬೇಕಾಗಿರುತ್ತದೆ ಎಂದು ಸಭೆಗೆ ತಿಳಿಸಿದರು. ನಂತರ ಸಭೆಯಲ್ಲಿ ಹಾಜರಿದ್ದ ಟ್ರಾಫಿಕ್ ಪೋಲೀಸ್ ಇನ್ಸ್‌ಪೆಕ್ಟರ್ ರವರು ಸದರಿ ಡಬ್ಬದ ಮೇಲೆ ನೋಟಿಸ್ ಪ್ರತಿಯನ್ನು ಅಂಟಿಸಿ ಸುಮಾರು ವಾರ ಅಥವಾ 10 ದಿನಗಳ ಸಮಯ ನೀಡಿ ತೆರವುಗೊಳಿಸುವಂತೆ ತಿಳಿಸಿ ಮಹಜರ್ ಮಾಡಿಕೊಳ್ಳಿ ನಂತರ ಯಾರೂ ತೆಗೆದುಕೊಳ್ಳದೇ ಇದ್ದಂತಹ ಪಕ್ಷದಲ್ಲಿ ಸದರಿ ಡಬ್ಬವನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳುವುದು ಸೂಕ್ತ ಎಂದು ಸಭೆಗೆ ತಿಳಿಸಿದರು. ಈ ಬಗ್ಗೆ ನೋಡಲ್ ಅಧಿಕಾರಿಯವರು ಮಾತನಾಡಿ ವಾರ್ಡ್ ಅಭಿಯಂತರರಿಗೆ ಸದರಿ ಡಬ್ಬದ ಮೇಲೆ ನೋಟಿಸ್ ಪ್ರತಿಯನ್ನು ಅಂಟಿಸಿ ಕಾಲಾವಕಾಶ ನೀಡಿ ಮುಂದಿನ ಕ್ರಮ ಕೈಗೊಳ್ಳುವಂತೆ ತಿಳಿಸಿದರು.

**ಕ್ರಮ: ವಾರ್ಡ್ ಅಭಿಯಂತರರು**

7. ವಾರ್ಡ್ 153ರ ಸ್ಥಳೀಯರಾದ ಶ್ರೀ. ರಾಧಾಕೃಷ್ಣ ರವರು ಮಾತನಾಡಿ ಜಯನಗರ 1ನೇ ಬ್ಲಾಕ್, 5ನೇ ಅಡ್ಡರಸ್ತೆ, ರಾಮ ಮಂದಿರ ಹತ್ತಿರದ ಟ್ರಾನ್ಸ್‌ಫಾರ್ಮರ್ ಬಳಿ ವೈರ್‌ಗಳು ಮತ್ತು ಮಣ್ಣುಗಳು ಕೂಡಿದ್ದು ಸದರಿಯನ್ನು ಸ್ವಚ್ಛಗೊಳಿಸುವಂತೆ ಕೋರಿದರು. ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಬೆಸ್ಕಾಂ ಇಂಜಿನಿಯರ್ ರವರು ಕೂಡಲೇ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದರು.

**ಕ್ರಮ: ಸಹಾಯಕ ಅಭಿಯಂರರು (ಬೆಸ್ಕಾಂ)**

8. ವಾರ್ಡ್ 153ರ ಸ್ಥಳೀಯರಾದ ಡಾ॥ ರಘುನಾಥ್ ರವರು ಮಾತನಾಡಿ ಜಯನಗರ 1ನೇ ಬ್ಲಾಕ್, 5ನೇ ಅಡ್ಡರಸ್ತೆಗೆ ಡಾಂಬರೀಕರಣ ಮಾಡಬೇಕು ಮತ್ತು ವಾರ್ಡ್ ಮಾರ್ಷಲ್‌ಗಳು ಸಭೆಗೆ ಬರಬೇಕು ಹಾಗೂ ಈ ಹಿಂದಿನ ಸಭೆಯಲ್ಲಿ ಚರ್ಚಿಸಿದಂತೆ ಜಯನಗರ 1ನೇ ಬ್ಲಾಕ್‌ಗೆ ಹೆಚ್ಚಿನ ಪೌರಕಾರ್ಮಿಕರನ್ನು ನಿಯೋಜಿಸಬೇಕೆಂದು ಕೋರಿದರು. ಈ ಬಗ್ಗೆ ವಾರ್ಡ್ ಅಭಿಯಂತರರು ಮಾತನಾಡಿ 5ನೇ ಅಡ್ಡರಸ್ತೆಗೆ ಡಾಂಬರೀಕರಣ ಮಾಡುವ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.



Scanned with CamScanner

ನಂತರ ನೋಡಲ್ ಅಧಿಕಾರಿಯವರು ಮಾತನಾಡಿ ಮಾರ್ಷಲ್‌ಗಳ ಮೇಲ್ವಿಚಾರಕರೊಂದಿಗೆ ಮಾತನಾಡಿ ಸದರಿಯವರು ಸಭೆಗೆ ಹಾಜರಾಗುವ ಬಗ್ಗೆ ಹಾಗೂ ಅವರ ಕಾರ್ಯವ್ಯಾಪ್ತಿಯ ಬಗ್ಗೆ ತಿಳಿದುಕೊಳ್ಳುವುದಾಗಿ ಸಭೆಗೆತಿ ತ್ತಿಳಿಸಿದರು. ನಂತರ ಜಯನಗರ 1ನೇ ಬ್ಲಾಕ್ ವ್ಯಾಪ್ತಿಗೆ ಪೌರಕಾರ್ಮಿಕರನ್ನು ನಿಯೋಜಿಸುವ ಕುರಿತು ಸಭೆಯಲ್ಲಿ ಹಾಜರಿದ್ದ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಈ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ತಿಳಿಸಿದರು.

ಕ್ರಮ : ವಾರ್ಡ್ ಅಭಿಯಂತರರು, ಕಿರಿಯ ಆರೋಗ್ಯ ಪರಿವೀಕ್ಷಕರು

9. ವಾರ್ಡ್ 153ರ ಸ್ಥಳೀಯರಾದ ಶ್ರೀ. ಸೋಮಶೇಖರ್ ರವರು ಮಾತನಾಡಿ ಕಲ್ಯಾಣ ಕಾರ್ಯಕ್ರಮ ಯೋಜನೆ ಅಡಿಯಲ್ಲಿ ಅನುದಾನ ಮೀಸಲಿರಿಸುವ ಕುರಿತು ಹಾಗೂ ತುಂಬಾ ಯೋಜನೆಗಳು ಜಾರಿ ಆಗದೇ ಇರುವ ಬಗ್ಗೆ ಸಭೆಯಲ್ಲಿ ಪ್ರಸ್ತಾಪಿಸಿದರು. ಈ ಬಗ್ಗೆ ನೋಡಲ್ ಅಧಿಕಾರಿಯವರು ಮಾತನಾಡಿ ಪಾಲಿಕೆಯಲ್ಲಿ ಕಲ್ಯಾಣ ಇಲಾಖೆ ಎಂಬ ಪ್ರತ್ಯೇಕ ವಿಭಾಗವಿದ್ದು, ಸದರಿ ವಿಭಾಗದಲ್ಲಿ ಯಾವ-ಯಾವುದಕ್ಕೆ ಅನುದಾನ ಮೀಸಲಿರಿಸಿರುತ್ತಾರೆ ಎಂಬ ಬಗ್ಗೆ ಮಾಹಿತಿ ಲಭ್ಯವಿರುತ್ತದೆ. ಆದ್ದರಿಂದ ತಾವುಗಳು ಈ ಬಗ್ಗೆ ಕಲ್ಯಾಣ ಇಲಾಖೆಯಿಂದ ಮಾಹಿತಿ ಪಡೆಯಬಹುದಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.

10. ವಾರ್ಡ್ 153ರ ಸ್ಥಳೀಯರಾದ ಶ್ರೀ. ಫಜಲ್‌ಖಾನ್ ರವರು ಮಾತನಾಡಿ ಬಿ.ಹೆಚ್.ಇ.ಎಲ್ ಲೇಔಟ್‌ನ ಚಿಕನ್‌ಕೌಂಟಿ ಬಳಿ ಪೆಟ್ಟಿ ಅಂಗಡಿ ಇದ್ದು, ಸದರಿ ಪೆಟ್ಟಿ ಅಂಗಡಿಯಲ್ಲಿ ಸಿಗರೇಟ್ ಮಾರುತ್ತಿರುತ್ತಾರೆ. ಇದರಿಂದ ತೊಂದರೆಯಾಗುತ್ತಿದ್ದು, ಕೂಡಲೇ ಸದರಿ ಪೆಟ್ಟಿ ಅಂಗಡಿಯನ್ನು ತೆರವುಗೊಳಿಸುವಂತೆ ಕೋರಿದರು. ಈ ಬಗ್ಗೆ ನೋಡಲ್ ಅಧಿಕಾರಿಯವರು ವಾರ್ಡ್ ಅಭಿಯಂತರರಿಗೆ ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ತಿಳಿಸಿದರು.

ಕ್ರಮ : ವಾರ್ಡ್ ಅಭಿಯಂತರರು

11. ವಾರ್ಡ್ 153ರ ಸ್ಥಳೀಯರಾದ ಶ್ರೀ. ಪ್ರಫುಲ್ಲಾ ಚಂದ್ರ ರವರು ಮಾತನಾಡಿ ಜಯನಗರ 1ನೇ ಬ್ಲಾಕ್, 6ನೇ ಅಡ್ಡರಸ್ತೆ, 10ನೇ ಮುಖ್ಯರಸ್ತೆಯ ಮನೆ ನಂ. 277/ಎ ರ ಮಾಲೀಕರು ಪಿ.ಜಿ. ನಡೆಸುತ್ತಿದ್ದು, ಸದರಿ ಪಿ.ಜಿ.ಎಲ್ಲಿ ಸುಮಾರು 40 ರಿಂದ 50 ಜನ ವಾಸವಿದ್ದು, ಸದರಿಯವರು ಮಧ್ಯರಾತ್ರಿಯವರೆಗೂ ಕೂಗಾಡುತ್ತ-ಕಿರಿಚಾಡುತ್ತ ಅಕ್ಕ-ಪಕ್ಕದ ಮನೆಯವರಿಗೆ ತೊಂದರೆಯಾಗುತ್ತಿರುವುದಾಗಿ ಹಾಗೂ ಅನಧಿಕೃತವಾಗಿ ಮನೆಯ ಮಹಡಿಯ ಮೇಲೆ 05 ಶೌಚಾಲಯಗಳನ್ನು ನಿರ್ಮಿಸಿರುತ್ತಾರೆ.



Scanned with CamScanner

ಇದರಿಂದ ಬಹಳ ತೊಂದರೆಯಾಗುತ್ತಿದ್ದು, ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ಕೋರಿದರು. ಈ ಬಗ್ಗೆ ನೋಡಲ್ ಅಧಿಕಾರಿಯವರು ಮಾತನಾಡಿ ಪೋಲೀಸ್ ಇಲಾಖೆಗೆ ಪತ್ರ ಬರೆಯಿರಿ ಮತ್ತು ಪಿ.ಜಿ. ನಡೆಸುತ್ತಿರುವ ಬಗ್ಗೆ ಅನುಮತಿ ಪಡೆದಿರುವ ಬಗ್ಗೆ ಹಿರಿಯ ಆರೋಗ್ಯ ಪರಿವೀಕ್ಷಕರು ಪರಿಶೀಲನೆ ನಡೆಸಲು ಹಾಗೂ ಅನಧಿಕೃತವಾಗಿ ನಿರ್ಮಿಸಿರುವ ಶೌಚಾಲಯಗಳ ಬಗ್ಗೆ ಪಾಲಿಕೆಯಿಂದ ಅನುಮತಿ ಪಡೆದಿರುವ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳಲು ವಾರ್ಡ್ ಅಭಿಯಂತರರಿಗೆ ತಿಳಿಸಿದರು.

12. ವಾರ್ಡ್ 153ರ ಸ್ಥಳೀಯರಾದ ಶ್ರೀ. ಅನೀಸ್ ಅಹಮದ್ ರವರು ಮಾತನಾಡಿ 2ನೇ ಮುಖ್ಯರಸ್ತೆ ಎಸ್.ಆರ್.ಕೆ ಗಾರ್ಡನ್‌ನಲ್ಲಿ ಕಸ ಗುಡಿಸುತ್ತಿಲ್ಲವೆಂದು ಹಾಗೂ ಕಸವನ್ನು ತೆಗೆಯುತ್ತಿಲ್ಲವೆಂದು ದೂರಿದರು. ಈ ಬಗ್ಗೆ ವಾರ್ಡ್ ಅಭಿಯಂತರರು ಮಾತನಾಡಿ ಸಭೆಯಲ್ಲಿ ಹಾಜರಿದ್ದ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಪರಿಶೀಲಿಸಿ ಕ್ರಮ ಕೈಗೊಳ್ಳಲು ತಿಳಿಸಿದರು.

**ಕ್ರಮ : ಕಿರಿಯ ಆರೋಗ್ಯ ಪರಿವೀಕ್ಷಕರು**

13. ವಾರ್ಡ್ 153ರ ಸ್ಥಳೀಯರಾದ ಶ್ರೀ. ಬಾಲಾಜಿ ರವರು ಮಾತನಾಡಿ ಮಾಧವನ್ ಪಾರ್ಕ್ ಬಳಿ ಇರುವ ಬ್ರಾಹ್ಮಿನ್ ಕೆಫೆ ಮುಂದೆ ವಾಹನಗಳನ್ನು ನಿಲ್ಲಿಸುತ್ತಿದ್ದು, ಇದರಿಂದ ಸಾರ್ವಜನಿಕರ ಓಡಾಟಕ್ಕೆ ತೊಂದರೆಯಾಗುತ್ತಿರುವುದಾಗಿ ದೂರಿದರು. ಈ ಬಗ್ಗೆ ವಾರ್ಡ್ ಅಭಿಯಂತರರು ಮಾತನಾಡಿ ಪ್ರಸ್ತಾಪಿತ ಸ್ಥಳವು ವಾರ್ಡ್ 169 ಭೈರಸಂಧ್ರ ವಾರ್ಡ್ ವ್ಯಾಪ್ತಿಗೆ ಸಂಬಂಧಪಟ್ಟಿರುತ್ತದೆ ಎಂದು ಸಭೆಗೆ ತಿಳಿಸಿದರು.

ಮೇಲಿನ ಎಲ್ಲಾ ಅಂಶಗಳನ್ನು ಕ್ರಮಬದ್ಧವಾಗಿ ನಿರ್ವಹಿಸಲು ಹಾಜರಿದ್ದ ಎಲ್ಲಾ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರಿಗೆ ತಿಳಿಸಿ ಮುಂದಿನ ಸಭೆಗೆ ಕಡ್ಡಾಯವಾಗಿ ಗೈರುಹಾಜರಾಗಿರುವ ಇತರೆ ಇಲಾಖೆಯವರು ಪಾಲ್ಗೊಂಡು ಮಾನ್ಯ ಆಯುಕ್ತರು (ಬಿಬಿಎಂಪಿ) ರವರು ವಹಿಸಿರುವ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಲು ಎಲ್ಲರೂ ಸಹಕರಿಸಬೇಕೆಂದು ತಿಳಿಸುತ್ತಾ ಸಭೆ ಮುಕ್ತಾಯಗೊಳಿಸಲಾಯಿತು.

| | |
|---|---|
| (ನವೀನ್‌ಕುಮಾರ್ ಕೆ.) | (ವರಲಕ್ಷ್ಮಮ್ಮ ಎಲ್) |
| ಕಾರ್ಯದರ್ಶಿ | ನೋಡಲ್ ಅಧಿಕಾರಿ |
| ವಾರ್ಡ್–153 ಜಯನಗರ | ವಾರ್ಡ್–153 ಜಯನಗರ |



Scanned with CamScanner